



ಆಕರ್ಷಕವಾಗಿ ಮಲ್ಲಿಗೆಯ ಜಲ್ಲಿ ಹಾಕುವ ಪದ್ಧತಿ ಇದೆ. ನಾಲ್ಕು ಅಟ್ಟೆ ಮಲ್ಲಿಗೆಯನ್ನಾದರೂ ಬಳಸುತ್ತಾರೆ' ಎನ್ನುತ್ತಾರೆ ಮದುವಣಗಿತ್ತಿಯ ಅಲಂಕಾರದಲ್ಲಿ ಸಾಕಷ್ಟು ಅನುಭವವುಳ್ಳ ಮಣಿಪಾಲದ ಪವನ ಬಾಲಚಂದ್ರ.

'ಒಟ್ಟಾರೆಯಾಗಿ ಮದುಮಗಳು ಸುಂದರವಾಗಿ ಕಾಣುವುದರ ಜೊತೆಗೆ ಆಕೆಯ ಮನಸ್ಸನ್ನು ಪ್ರಫುಲ್ಲವಾಗಿ ಇರಿಸುವುದು ಈ ಅಲಂಕಾರದ ಒಟ್ಟು ಹಿನ್ನೆಲೆ. ಬಳಸುವ ಮಂಗಳದ್ರವ್ಯಗಳೂ ಪರಿಮಳದ್ರವ್ಯಗಳೂ ಹೂಗಳೆಲ್ಲವೂ ಅರೋಮ ಥೆರಪಿಯಂತೆ ಕೆಲಸ ಮಾಡಿ ಸಹಕರಿಸುತ್ತವೆ. ಜಡೆಗೆ ಚಕ್ರಾಕಾರವಾಗಿ ಹೂವು ಸುತ್ತುವುದಕ್ಕೂ ಅರ್ಥ ಇದೆ. ಇತ್ತೀಚೆಗೆ ರೆಡಿಮೇಡ್ ಜಲ್ಲಿಗಳು ಸಾಕಷ್ಟು ವಿನ್ಯಾಸಗಳಲ್ಲಿ ಸಿಗುತ್ತವೆ. ಇವುಗಳು ನಮ್ಮ ಕೆಲಸವನ್ನು ಸುಲಭಗೊಳಿಸುತ್ತವೆ. ಸಾಂಪ್ರದಾಯಿಕ ರೀತಿಯ ಅಲಂಕಾರವೇ ಮೆರುಗನ್ನು ಹೆಚ್ಚಿಸುವಂತಹದು' ಎಂದು ವಿವರಿಸುತ್ತಾರೆ.

ಮದುವೆಯ ಸಂದರ್ಭದಲ್ಲಿ ಇಂದಿಗೂ ಹೆಚ್ಚಿನೆಡೆಗಳಲ್ಲಿ ತಮ್ಮ ತಮ್ಮ ಸಂಪ್ರದಾಯದಂತೆ ಸೀರೆಯನ್ನೋ ಇತರ ದಿರಿಸುಗಳನ್ನೋ ಧರಿಸುತ್ತಾರೆ. ಪುರುಷರೂ ಕುರ್ತಾ, ಧೋತಿ ಮುಂತಾದುವನ್ನು ಧರಿಸುತ್ತಾರೆ. ಆದರೆ ಅದರ ಹಿಂದಿನ ರಿಸೆಪ್ಶನ್ ಅಥವಾ ಮೆಹಂದಿ ಕಾರ್ಯಕ್ರಮಗಳಲ್ಲಿ ವಿಶೇಷವಾಗಿ ಲೆಹೆಂಗಾ, ಆಕರ್ಷಕವಾಗಿ ಕಾಣುವ ಘಾಗ್ರಾವನ್ನೋ ಧರಿಸುತ್ತಾರೆ. ಹುಡುಗರು ಪಾಶ್ಚಾತ್ಯ ದಿರಿಸನ್ನೂ ಧರಿಸುತ್ತಾರೆ. ಸಂಜೆಯ ವಿಶೇಷ ಪಾರ್ಟಿಗಳಲ್ಲಿ ಪಾಶ್ಚಾತ್ಯ ಗೌನ್‌ಗಳನ್ನೂ ಧರಿಸುವುದಿದೆ. ಅದಕ್ಕಾಗಿ ವಿಶೇಷ ತಯಾರಿ ನಡೆಸುವುದೂ ಇದೆ. ಮದುಮಗಳ ಸಂಬಂಧಿಕರೆಲ್ಲ ಮದುಮಗಳ ಬಟ್ಟೆಯ ಬಣ್ಣದ ಬಟ್ಟೆಯನ್ನೂ ಮದುಮಗನ ಕಡೆಯವರು ಮದುಮಗನ ದಿರಿಸಿನ ಬಣ್ಣದ ಬಟ್ಟೆಯನ್ನೇ ಧರಿಸುವುದಿದೆ. ಎಲ್ಲರೂ ಒಂದೇ ರೀತಿಯ ಗೌನ್‌ಗಳನ್ನೋ ಲೆಹೆಂಗಾವನ್ನೋ ಸೀರೆಯನ್ನೋ ಧರಿಸುವುದೂ ಇದೆ. ಮದುವೆಯ ಮದುಮಗಳ ಚೋಲಿ ಹೊಲಿಯುವುದರಲ್ಲೂ ಇತ್ತೀಚೆಗೆ ವಿಶೇಷ ವಿನ್ಯಾಸಗಳು ಬಂದಿವೆ. ಆಕರ್ಷಕವಾಗಿ ಕಾಣುವ ಈ ಚೋಲಿ ತಯಾರಿಸುವುದೂ ಡಿಸೈನರಸ್‌ಗಳಿಗೆ ಕಷ್ಟದ ಕೆಲಸವೂ ಹೌದು.

'ಕೇಶ ವಿನ್ಯಾಸದಲ್ಲೂ ಹೊಸತನ ಸೇರಿಕೊಂಡಿದೆ. ಪಾರ್ಲರ್‌ನವರು ಬಂದು ವಿಶಿಷ್ಟ ರೀತಿಯ ಆಧುನಿಕ ತುರುಬುಗಳನ್ನೂ ಹಾಕುವುದಿದೆ. ಸಂಪ್ರದಾಯಕ್ಕಿಂತ ಹೆಚ್ಚಾಗಿ ತೊಡುವ ಬಟ್ಟೆಗೆ ಹೊಂದಿಕೊಳ್ಳುವ ಶೈಲಿಯ ಆಭರಣಗಳನ್ನು ಧರಿಸುವ ಪದ್ಧತಿಯೂ ಇದೆ. ಹಿಂದೆ ಚಿನ್ನ ಅಥವಾ ವಜ್ರದ ಆಭರಣಗಳೇ ಹೆಚ್ಚು. ಆದರೆ ಕಾಲ ಬದಲಾದಂತೆ ಪ್ಲಾಟಿನಂ ಆಭರಣಗಳೋ ಮುತ್ತಿನ ಆಭರಣಗಳನ್ನೋ ಬೆಳ್ಳಿಯ ಆಭರಣಗಳನ್ನೋ ಧರಿಸುತ್ತಾರೆ. ಬಾಡಿಗೆಗೆ ಪಡೆದು ಧರಿಸುವುದೂ ಇದೆ' ಎನ್ನುತ್ತಾಳೆ ತನ್ನ ಮದುವೆಯ ತಯಾರಿಯಲ್ಲಿರುವ ಶುಭಾ.

'ಸಿನೆಮಾಗಳಲ್ಲಿ, ಧಾರಾವಾಹಿಗಳಲ್ಲಿ ಕಂಡಂತೆ ಮಾಡಲು ಹೊರಡುವವರೇ ಹೆಚ್ಚು. ಈ ನಿಟ್ಟಿನಲ್ಲಿ ಇಂಟರ್‌ನೆಟ್ ತನ್ನ ಕೊಡುಗೆಯನ್ನೂ ಕೊಟ್ಟಿದೆ. ಆರ್ಕಿಡ್ ಹೂವನ್ನು ಧರಿಸುವುದೂ ಇದೆ. ಯಾವುದೇ ಸಂಸ್ಕೃತಿಯನ್ನು ಪಾಲಿಸುವುದು ತಪ್ಪಲ್ಲ' ಎನ್ನುತ್ತಾರೆ ಪವನ.

ಆದರೆ ಈ ಎಲ್ಲಾ ಆಧುನಿಕ ಬೆಳವಣಿಗೆ ಆರ್ಥಿಕವಾಗಿ ಹೊರೆಯೂ ಹೌದು. ಒಳ್ಳೆ ಸೀರೆ ಬೇಕೆಂದಿದ್ದರೆ ತುಂಬಾ ಹಣ ವ್ಯಯಿಸಬೇಕಾಗುತ್ತದೆ, ಖರ್ಚಿಗೆ ದಾರಿಯೆನಿಸುತ್ತವೆ. ಡಿಸೈನರ್ ಸೀರೆಗಳಂತೂ ಕೈಗೆಟಕುವ ದರದಲ್ಲಿ ಸಿಗುವುದು ಅಪರೂಪ. ಅದರ ಪೂರಕ ತಯಾರಿಗಾಗಿಯೂ ಸಾಕಷ್ಟು ಖರ್ಚು ಮಾಡಬೇಕಾಗುತ್ತದೆ. ಭಾರತೀಯ ಮದುವೆಗಳು ದೇಶದ ಆರ್ಥಿಕ ಸುಸ್ಥಿತಿಗೂ ಕೊಡುಗೆ ನೀಡುತ್ತಿವೆ ಎಂಬುದು ಆರ್ಥಿಕ ತಜ್ಞರ ಮಾತು.

ಈ ಎಲ್ಲ ಬೆಳವಣಿಗೆಯನ್ನು ಕಂಡ ಸರಳ ವಿವಾಹ ಪ್ರತಿಪಾದಿಸುವವರು ಒಂದು ದಿನದ ಖುಷಿಗಾಗಿ ಜೀವಮಾನದ ದುಡಿಮೆಯನ್ನೆಲ್ಲಾ ವ್ಯಯಿಸುತ್ತಾರೆ ಎಂದು ದೂರುತ್ತಾರೆ. ಸಾಲ ಮಾಡಿ ಮದುವೆ ಮಾಡುವುದನ್ನೂ ವಿರೋಧಿಸುತ್ತಾರೆ. ಆದರೂ ಆ ಸಂಭ್ರಮಕ್ಕಾಗಿ ಸಂತೋಷಕ್ಕಾಗಿ ಎಷ್ಟು ಮಾಡಿದರೂ ಚೆನ್ನ ಎಂಬ ಭಾವ ಇರುವವರೆಗೆ ಈ ಪ್ರಯತ್ನಗಳು ನಡೆದೇ ಇರುತವೆ. ತಾವು ಮಾಡಿಕೊಂಡಿದ್ದನ್ನು ಇನ್ನೊಬ್ಬರು ಕಂಡು ಮೆಚ್ಚುಗೆಯ ಮಾತನ್ನಾಡಿದಾಗ ತಮಗಾಗುವ ಸಂತೋಷದ ಮೌಲ್ಯಾಂಕನ ಸಾಧ್ಯವೇ? ■